Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship

Volume 40 Issue - 45 14th May 2026

## CLUB ASSEMBY

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ

ರೋಟರಿಯಂತಾ ಮಹಾನ್ ಸಂಸ್ಥೆಗಳ ಸದಸ್ಯರಾದಂತಹ ನಮ್ಮೆಲ್ಲರಿಗೂ ಸಮಾಜ ಮುಖಿಯಾಗಿ ಕೆಲವೊಂದು ಜವಾಬ್ದಾರಿಗಳಿವೆ. ಇದು ನಿಮಗೆ ನೀವು ಬದುಕುತ್ತಿರುವ ಸಮಾಜದಲ್ಲಿರಬಹುದು ನಮ್ಮ ನಿಮ್ಮೆಲ್ಲರ ಆಪ್ತ ವಲಯದಲ್ಲಿರಬಹುದು ಅದು ನಮ್ಮ ಮುಂದಿನ ಪೀಳಿಗೆ! ಏಕೆ ಆಶ್ಚರ್ಯ ಆಯಿತೇ ಇದು very important. ಹೊಸ ಜನರೇಶನ್ ಮಕ್ಕಳಲ್ಲಿ ತಾಳ್ಮೆ ಎನ್ನುವುದು ಕಡಿಮೆಯಾಗುತ್ತಿದೆ ಮಕ್ಕಳೇನು 19 20 ರ ಹರೆಯದ ಮಕ್ಕಳಿಗಾಗಿ ನಾವು ನಮ್ಮ ದಿನದ ಕೆಲವು ಸಮಯವನ್ನು ಅವರಿಗೆ councelling ಮಾಡಲು ಮೀಸಲು ಇಡಬೇಕು. ಇಂದಿನ ಮಕ್ಕಳು ಎಲ್ಲದರಲ್ಲೂ ಚುರುಕು. ಆದರೆ ಸಮಸ್ಯೆ ಬಂದಾಗ ಅದು ದೊಡ್ಡದಿರಲಿ ಸಣ್ಣದಿರಲಿ ಎದುರಿಸುವ ಧೈರ್ಯ ಎಷ್ಟೊಂದು ಸಾಲದು. ಕಷ್ಟ ಪರಿಹಾರದ ಮಾರ್ಗೋಪಾಯಗಳನ್ನು ಹುಡುಕಲು ಅವರಿಗೆ ಕಷ್ಟ ಸಾಧ್ಯವಾಗುತ್ತಿದೆ. ನಿತ್ಯ ಪೇಪರ್ ನಲ್ಲಿ ನೋಡುವುದು 19ರ ಹರೆಯದ ಯುವಕ 22ರ ಹರೆಯದ ಯುವತಿ ಆತ್ಮಹತ್ಯೆಗೆ ಶರಣು, ಇಲ್ಲ ಅತ್ಯುತ್ಸಾಹದಿಂದ ಬೈಕ್ ನಲ್ಲಿ ಆಕ್ಸಿಡೆಂಟ್ ಆಗಿ ಸಾವು ಅಥವಾ ಪರ್ಮನೆಂಟ್ bedridden, ನದಿ ಕೆರೆ ಕಂಡೊಡನೆ ಈಜಲು ತೆರಳಿ ಸಾಯುವುದು ಸಾಮಾನ್ಯವಾಗಿವೆ. ಒಂದು ರೀತಿಯಲ್ಲಿ ಆಸ್ಪತ್ರೆಯಲ್ಲಿ ವೃತ್ತಿ ನಿರ್ವಹಿಸುವುದು ದೇಶದ ಗಡಿ ಕಾಯುವ ಸೈನಿಕರು ಇದ್ದಂತೆ. ನಿತ್ಯ ಹೊಸ ಹೊಸ ನೋವುಗಳು ಇರತಕ್ಕಂತಹ ರೋಗಿಗಳು ಅವರ ಕುಟುಂಬದವರ ವೇದನೆ ನಿತ್ಯ ನೋಡಿ ನೋಡಿ ಹೃದಯ ಕಲ್ಲಾಗಿರುತ್ತದೆ. ನಾನು ನೋಡಿದ ಹಲವಾರು caseಗಳಲ್ಲಿ ಎರಡು ಕೇಸ್‌ಗಳ ಬಗ್ಗೆ ತಿಳಿಸುತ್ತೇನೆ.

ಕೊಕ್ಕರ್ಣೆ ಬದಿಯ ಒಂದು ಕುಗ್ರಾಮದ ಹುಡುಗ. ತಾಯಿ ಅಂಗವಿಕಲೆ. ಆದರು ಸರ್ಕಾರಿ ಲೈಬ್ರರಿಯಲ್ಲಿ ದಿನಗೂಲಿ ಕೆಲಸ, ತಂದೆ ಹೋಟೆಲ್‌ನಲ್ಲಿ ಮ್ಯಾನೇಜರ್ ಕೆಲಸ. ಈ ಹುಡುಗ 19 ರ ಹರೆಯದವನು. ಉದ್ಯೋಗವನ್ನು ಮುಗಿಸಿ ಬೈಕ್‌ನಲ್ಲಿ ಬರುವಾಗ ರಸ್ತೆ ಅಪಘಾತದಲ್ಲಿ ಕಲ್ಲಿನ ಮೇಲೆ ಬಿದ್ದು brain ಮತ್ತು Spinal cord ಗೆ ಬಹಳ ದೊಡ್ಡ injury ಆಗಿ 9 ತಿಂಗಳಿಂದ ಹಾಸಿಗೆಯಲ್ಲೇ ಚಿಕಿತ್ಸೆ. ತಂದೆ ತನ್ನ ಇರುವ ಒಬ್ಬ ಮಗನ ಶುಶ್ರೂಷೆಗಾಗಿ ಉದ್ಯೋಗವನ್ನು ತೊರೆದು ಮಗನೊಡನೆ ಆಸ್ಪತ್ರೆಯಲ್ಲಿ ತಾಯಿ ತನ್ನ ಲೈಬ್ರರಿ ಕೆಲಸದಲ್ಲಿ. Discharge bill ಹಾಗೂ ಔಷಧಿಗೆ ನಾವುಗಳು ಸಹಾಯವನ್ನು ಮಾಡುವ ಪರಿಸ್ಥಿತಿ ಬಂದಿತು. ಇದಾದ 10 ದಿನದ ನಂತರ ಈ ಹುಡುಗನ ತಂದೆ ಪುನಃ ನಮ್ಮ ಆಸ್ಪತ್ರೆಗೆ ಆಗಮಿಸಿ ತಾವು ತೆಗೆದುಕೊಂಡು ಹೋದ ಔಷಧಿಗಳನ್ನು ಹಿಂದಿರುಗಿಸುತ್ತ ಹೇಳಿದರು "ಮೂರು ದಿನದ ಹಿಂದೆ ನನ್ನ ಮಗ ತೀರಿಕೊಂಡ ನೀವುಗಳು ಕರುಣೆ ತೋರಿ ಅವನಿಗೆ ಮಾಡಿದ ಸಹಾಯ ನಾವು ಮರೆಯುವುದಿಲ್ಲ. ಅವನಿಗೆ ಅಂತ ನೀವು ತೆಗೆಸಿಕೊಟ್ಟ ಔಷಧಿಗಳನ್ನು ಪುನಃ ಹಿಂದಿರುಗಿಸುತ್ತಿದ್ದೇನೆ ಬೇರಾವುದೋ ಬಡ ರೋಗಿಗಳಿಗೆ ಇದು ಉಪಯೋಗವಾಗಲಿ" ಎಂದು ಕಣ್ಣೀರಿನೊಂದಿಗೆ ಹಿಂದಿರುಗಿದರು. ಈ ಹೃದಯ ವಿದ್ರಾವಕ ದೃಶ್ಯ ಎಂತಹ ಕಲ್ಲು ಹೃದಯಕ್ಕೂ ಕಣ್ಣೀರನ್ನು ತರಿಸುತ್ತದೆ.

ಇನ್ನು ನಮ್ಮ ಬಂಧು ಒಬ್ಬರ ಸಮೀಪ ಸಂಬಂಧಿ 22 ರ ಯುವತಿ. ಗಂಡ ವಿದೇಶದಲ್ಲಿ ಕೆಲಸ. ಇತ್ತ ತಾನೂ ಊರಿನಲ್ಲಿ ಕೆಲಸ ಮಾಡುತ್ತೇನೆಂದು ಶಾಲೆಯಲ್ಲಿ ಶಿಕ್ಷಕಿಯಾಗಿ ವೃತ್ತಿ ನಿರ್ವಹಿಸುತ್ತಿದ್ದಳು. ಆದರೆ ಶಾಲೆಯ ಆಡಳಿತ ಮಂಡಳಿಯವರ ಯಾವುದೋ ಒಂದು ದೌರ್ಜನ್ಯಕ್ಕೆ ಯಾರಿಗೂ ಹೇಳಿಕೊಳ್ಳಲಾಗದೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದಳು. ಮನೆಯವರು ಅಕ್ಕಪಕ್ಕದವರು ಆಗಮಿಸಿ, ಅವಳನ್ನು ತಕ್ಷಣಕ್ಕೆ ಆಸ್ಪತ್ರೆಗೆ ಸೇರಿಸಿದರು. ಅವಳಿಗೆ ಪ್ರಜ್ಞೆ ಬರಲು ಒಂದು ತಿಂಗಳು ಬೇಕಾಯಿತು. ಈಗ ಅದೇ ಆಸ್ಪತ್ರೆಯಲ್ಲಿ ಮೂರು ತಿಂಗಳು ಕಳೆದರೂ ಕೇವಲ ಕಣ್ಣು ಬಿಟ್ಟು ರೆಸ್ಪಾನ್ಸ್ ಮಾಡುತ್ತಾಳೆ ಯಾರುಡ ನೀವು ಮಾತುಕತೆ ಇಲ್ಲ. ಹಾಸಿಗೆಯಿಂದ ಎದ್ದೇಳಲು ಆಗುತ್ತಿಲ್ಲ. ಅವಳ ಹೆತ್ತವರು ಹಾಗೂ ಗಂಡ ಅತ್ಯಂತ ವೇದನೆಯಿಂದ ಹೇಗಾದರೂ ಮಾಡಿ ಅವಳನ್ನು ಮೊದಲಿನಂತೆ ಮಾಡಿ ಎಂದು ದೈನತೆಯಿಂದ ನಮ್ಮನ್ನು ಕೇಳಿಕೊಳ್ಳುವಾಗ ಎಂಥಾ ಮಕ್ಕಳಪ್ಪ ಒಂದು ಕ್ಷಣದ ಆತುರ ಬದುಕೇ ಸರ್ವನಾಶ. ನನ್ನ ರೋಟರಿ ಮಿತ್ರರೇ, ಈ ವಿಚಾರವನ್ನು ತಮ್ಮೊಡನೆ ಅತ್ಯಂತ ದುಃಖಿತನಾಗಿ ಹಂಚಿಕೊಳ್ಳುತ್ತಿದ್ದೇನೆ. ನಾವು ರೋಟರಿಯವರು ನಮ್ಮ ಮನೆಯಾಗಲಿ ಅಥವಾ ನಮ್ಮ ಸಮಾಜವೇ ಆಗಿರಲಿ ಅಲ್ಲಿರುವ ಹದಿಹರೆಯದ ಯುವಕ ಯುವತಿಯರಿಗೆ ಅವರಿಗೆ ಬೇಸರ ಆದರೂ ಅಡ್ಡಿಲ್ಲ. ಇಂತಹ ಕೆಲವು ವಿಚಾರಗಳನ್ನು ಮನಮುಟ್ಟುವಂತೆ ತಿಳಿಸಿ. ಅವರು ತಪ್ಪು ಹೆಜ್ಜೆ ಇಡುವ ಮೊದಲು ನಮ್ಮ ಮಾತುಗಳನ್ನು ನೆನಪಿಸಿಕೊಳ್ಳುವಂತೆ ಕೌನ್ಸಿಲಿಂಗ್ ಮಾಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

**– ರೊ. ರಮಾನಂದ ಕಾರಂತ**

---

## ವಾರದ ವರದಿ

ತಾ 07, ಗುರುವಾರದಂದು ನಡೆದ ನಮ್ಮ ವಾರದ ಸಭೆಗೆ Rtn.PP. ಪ್ರಕಾಶ್‌ಚಂದ್ರ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಮ್ಯೂಚುವಲ್ ಫಂಡಿನ ಮಹತ್ವ ಹಾಗೂ ಯಾವ ರೀತಿ ಹಣವನ್ನ ಹೂಡಿಕೆ ಮಾಡಬೇಕು ನಾವು, ಬದುಕಿನಲ್ಲಿ ಹೆಲ್ತ್ ಇನ್ಶೂರೆನ್ಸ್ ಏಕೆ ಬೇಕು? ಎಂಬ ವಿಚಾರಗಳಲ್ಲಿ ಇರುವ ಅಮೂಲ್ಯ ಮಾಹಿತಿಗಳನ್ನು ಹಾಗೂ ಅಪರೂಪದ ಸಂಗತಿಗಳನ್ನು ಸಭಾ ಸದರಿಗೆ ತಿಳಿಸಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಆಗಮಿಸಿದ ಅತಿಥಿಗಳನ್ನು ಹಾಗೂ ಸರ್ವ ರೋಟರಿ ಸದಸ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಜಾನ್ಸನ್ ಅಲ್ಮೆಡಾ ವಾರದ ಚಿಂತನೆಯನ್ನು ಮಂಡಿಸಿದರು. ರೊ. ಜುಡಿತ್ ಮೆಂಡೋನ್ಸ ರೋಟರಿ ಮಾಹಿತಿ ತಿಳಿಸಿದರು. ರೊ. ರಮಾನಂದ ಕಾರಂತ್ ಅವರು ಅತಿಥಿಗಳ ಪರಿಚಯ ನೀಡಿದರು. ರೊ. ಪ್ರಕಾಶ್ ಶೆಟ್ಟಿ ವಂದನಾರ್ಪಣೆ ಮಾಡಿದರು. ರೊ. ಜೆರಾಲ್ಡ್ ಕ್ರಾಸ್ತಾ ಸಭೆಯ ಕೊನೆಯಲ್ಲಿ ತಮ್ಮ ಹಾಸ್ಯ ಚಟಾಕಿಯಲ್ಲಿ ಸಭೆಯನ್ನು ನಗಿಸಿದರು.












## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 16–05–2026ನೇ ಶನಿವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಕೆ. ಶ್ರೀನಿವಾಸ ಶೇಟ್ ಮತ್ತು ಆ್ಯನ್ ಗೀತಾ ಶೇಟ್ ಅವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು.

ಮೊಬೈಲ್ : 9242117024



ತಾ. 20–05–2026ನೇ ಬುಧವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಅರುಣ್ ಮೆಂಡೋನ್ಸಾ ಮತ್ತು ಆ್ಯನ್ ಟೀನಾರವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9845137656

## ಹುಟ್ಟುಹಬ್ಬದ ಶುಭಾಶಯಗಳು

ರೊ. ಮಾಜಿ ಅಧ್ಯಕ್ಷ ಡಾ. ಹೆಚ್. ಎ. ವಿಶ್ವೇಶ್ವರ್
ದಿನಾಂಕ : ಮೇ 18
ಮೊಬೈಲ್ : 9448869987





ರೊ. ಮಾಜಿ ಅಧ್ಯಕ್ಷ ಕೆ.ಟಿ. ಸುರೇಂದ್ರನಾಥ್
ದಿನಾಂಕ : ಮೇ 15
ಮೊಬೈಲ್ : 9880477460


Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. S. Sadananda Chatra
1996-97


Rtn. B. C. Somayaji
1997-98


Rtn. K. Suresh Kamath
1998-99


Rtn. S. Subraya Halambi
1999-2000


Rtn. S. Vijaya Shetty
2000-01


Rtn. K. Seetharama Nackathaya
2001-02


Rtn. U. S. Shenoy
2002-03


Rtn. Dr. Umesh Puthran
2003-04


Rtn. Dr. B. V. Udupa
2004-05


Rtn. A. Shantharam Pai
2005-06


Rtn. K. Shantharam Prabhu
2006-07

**ರೋಟರಿ ಮಾಹಿತಿ**

## ರೋಟರಿಯ ಉದ್ದೇಶಗಳು

ಜಗತ್ತಿನ ಕೆಲವು ಪ್ರದೇಶಗಳಲ್ಲಿ ರೋಟರಿಯ ಸಾಪ್ತಾಹಿಕ ಸಭೆಗಳು ಪ್ರಾರಂಭಿಸುವಾಗ ಎಲ್ಲಾ ಸದಸ್ಯರು ಎದ್ದು ನಿಂತು ರೋಟರಿಯ ಉದ್ದೇಶಗಳನ್ನು ಹೇಳಿಕೊಳ್ಳುತ್ತಾರೆ. ಈ ಉದ್ದೇಶಗಳು ರೋಟರಿ ಇಂಟರ್‌ನ್ಯಾಶನಲ್ ಸಂವಿಧಾನದಿಂದ ರೂಪಿತವಾಗಿದ್ದು, ಇದನ್ನು ರೋಟೇರಿಯನ್ನರ ಕಛೇರಿಗಳಲ್ಲಿ ಇಲ್ಲವೇ ಅವರ ಕಾರ್ಯನಿರ್ವಹಿಸುವ ಸ್ಥಳಗಳಲ್ಲಿ ಭಿತ್ತಿ ಫಲಕದ ಮೂಲಕ ಪ್ರದರ್ಶಿಸಲಾಗುತ್ತದೆ.

‘ಸೇವೆಯೇ ಅಮೂಲ್ಯ ಕಾರ್ಯ’ ಎಂಬ ಆದರ್ಶವನ್ನು ಬೆಳೆಸಿ ಉತ್ತೇಜಿಸುವುದು ರೋಟರಿಯ ಮೊದಲ ಗುರಿಯಾಗಿದೆ. “ಸೇವೆಯೇ ಆದರ್ಶ” ಎಂಬ ರೋಟರಿಯ ಹೇಳಿಕೆಯು ಇನ್ನೂ ಏಳು ನೆಲೆಗಳನ್ನು ಪಟ್ಟಿ ಮಾಡುತ್ತದೆ. ಸೇವೆ ಸಲ್ಲಿಸುವುದು ಮಾತ್ರವಲ್ಲದೆ, ಸಾಹಸಚರ್ಯವನ್ನು ಬೆಳೆಸಿಕೊಳ್ಳುವುದು, ವೃತ್ತಿ ಮತ್ತು ವ್ಯವಹಾರದಲ್ಲಿ ಉನ್ನತ ನೈತಿಕ ಮೌಲ್ಯಗಳ ಪಾಲನೆ ಮಾಡುವುದು, ಎಲ್ಲಾ ವೃತ್ತಿಗಳ ಮಹತ್ವವನ್ನು ಗುರುತಿಸಿಕೊಳ್ಳುವುದು, ಪ್ರತೀ ರೋಟರಿ ಸದಸ್ಯರ ವೃತ್ತಿಯು ಸಮಾಜಕ್ಕೆ ಸೇವೆ ಸಲ್ಲಿಸುವ ಅವಕಾಶವೆಂದು ಗುರುತಿಸಿಕೊಳ್ಳುವುದು, ಸ್ವಂತ ವ್ಯವಹಾರ ಮತ್ತು ಸಾರ್ವಜನಿಕ ಜೀವನದಲ್ಲಿ ಸೇವೆಯೇ ಆದರ್ಶವೆಂದು ಗುರುತಿಸಿಕೊಳ್ಳುವುದು, ಸೇವೆಯೆಂಬ ಆದರ್ಶಕ್ಕೆ ಬದ್ಧರಾದ ವೃತ್ತಿಪರರನ್ನು ಗೌರವಿಸುವುದು, ಜಾಗತಿಕ ವ್ಯವಹಾರ ಸಹಯೋಗದ ಮೂಲಕ ಅಂತರಾಷ್ಟ್ರೀಯ ನೆಲೆಯ ತಿಳುವಳಿಕೆಯ ಮೂಲಕ ಶಾಂತಿ ಮತ್ತು ಸಹೃದಯತೆಯನ್ನು ಬೆಳೆಸುವಂತೆ ಮಾಡಬೇಕು.

ರೋಟರಿಯ 1906ರ ಮೂಲ ಸಂವಿಧಾನದಲ್ಲಿ ಮೂರು ಮುಖ್ಯ ಉದ್ದೇಶಗಳಿದ್ದವು. ವ್ಯಾವಹಾರಿಕ ಆಸಕ್ತಿಯನ್ನು ವೃದ್ಧಿಗೊಳಿಸುವುದು, ಶಾಂತಿಯ ಮನೋಭಾವವನ್ನು ಬೆಳೆಸುವುದು ಮತ್ತು ಸಮಾಜದ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದು. 1910ರ ಹೊತ್ತಿಗೆ ರೋಟರಿಯ ವ್ಯಾಪ್ತಿಯನ್ನು ಹೆಚ್ಚಿಸುವ ಸಲುವಾಗಿ ಈ ಮೂರು ಉದ್ದೇಶಗಳು ಐದು ಆದವು. 1915ರಲ್ಲಿ ಇನ್ನೂ ಒಂದು ಸೇರಿಸಿ ಆರಕ್ಕೆ ವಿಸ್ತರಿಸಲಾಯಿತು. 1951ರಲ್ಲಿ ಅಂತಿಮ ತಿದ್ದುಪಡಿಯನ್ನು ಮಾಡಿ ಒಂದೇ ಉದ್ದೇಶವನ್ನು ನಾಲ್ಕು ಭಾಗಗಳಲ್ಲಿ ನಿರೂಪಿಸಲಾಯಿತು.

**THE ROTARY 4-WAY TEST**

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?


ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷರಾದ ರೊ. ಸಚಿನ್ ನಕ್ಕತ್ತಾಯ ಇವರ ಹುಟ್ಟುಹಬ್ಬವನ್ನು ಅವರ ಸ್ವಗೃಹದಲ್ಲಿ ಆಚರಿಸಲಾಯಿತು.

ಮನದಲ್ಲಿ ಮೂಡಿದ ಸಾವಿರಾರು ಉತ್ಕೃಷ್ಟ ಯೋಚನೆಗಳು ನಿಮ್ಮ ಬದುಕನ್ನು ಹಸನುಗೊಳಿಸದು. ಆದರೆ ಹೊಳೆದ ಒಂದು ಕಲ್ಪನೆಯನ್ನು ಕಾರ್ಯರೂಪಕ್ಕೆ ತಂದಾಗಲೇ ಬದುಕಿನಲ್ಲಿ ಯಶಸ್ಸು ಲಭಿಸುವುದು.

*This Bulletin is sponsored by :*
Rtn. Suma Puthran
Mob. : 9449802010
For Private Circulation only

Email id – rotaryclub.kundapurasouth@gmail.com


Rtn. T. Raghavendra Hatwar
2007-08


Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17


Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24


Rtn. Judith Mendonca
2024-25